ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 4, September-October 2025, Pp. 116-119
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ದ. ರಾ. ಬೇಂದ್ರೆಯವರ ಭೂಮಿ ತಾಯಿಯ ಚೊಚ್ಚಿಲ ಮಗ ಕಾವ್ಯದ ವಿಮರ್ಶಾತ್ಮಕ ನೋಟ

**ಮೀನಾಕ್ಷಿ ಎನ್. ಪಿ**
ಕನ್ನಡ ಸಹಾಯಕ ಪ್ರಾಧ್ಯಾಪಕರು, ದಯಾನಂದಸಾಗರ ಆರ್ಟ್ಸ್, ಸೈಯನ್ಸ್ ಅಂಡ್ ಕಾಮರ್ಸ್ ಕಾಲೇಜು, ಕುಮಾರರಸ್ವಾಮಿ ಬಡಾವಣೆ, ಬೆಂಗಳೂರು

***Abstract:***
*ದೇವತಾ ಪೃಥ್ವಿ ಎಂದು ಕರೆಸಿಕೊಳ್ಳುವ ಭೂಮಿತಾಯಿಯನ್ನು ನಂಬಿ ಜೀವನ ಸಾಗಿಸುತ್ತಿರುವ ಶೇ.60ಕ್ಕೂ ಹೆಚ್ಚು ಜನರು ನಮ್ಮ ದೇಶದಲ್ಲಿದ್ದಾರೆ. ನಮ್ಮ ದೇಶವು ಪ್ರಮುಖವಾಗಿ ಕೃಷಿ ಪ್ರಧಾನ ರಾಷ್ಟ್ರವಾಗಿದ್ದು, ಇಲ್ಲಿ ಕೃಷಿಕರ ಸ್ಥಾನಮಾನ ಮಹತ್ವದ್ದಾಗಿದೆ. ನಮ್ಮ ದೇಶದ ಆರ್ಥಿಕತೆ, ಸಂಸ್ಕೃತಿ, ಸಮಾಜ ಮತ್ತು ಜೀವನ ಶೈಲಿಯ ಮೂಲವೇ ಕೃಷಿ. ಕೃಷಿಯು ಸಾವಿರಾರು ವರ್ಷಗಳ ಇತಿಹಾಸವನ್ನು ಹೊಂದಿದ್ದು, ದೇಶದ ಬಹುಪಾಲು ಜನಸಂಖ್ಯೆ ಇನ್ನೂ ಕೃಷಿ ಮತ್ತು ಅದರ ಆಧಾರಿತ ವೃತ್ತಿಗಳಲ್ಲಿ ನಿರತರಾಗಿದ್ದಾರೆ. ರೈತನು ತನ್ನ ದುಡಿಮೆಯಿಂದ, ಪರಿಶ್ರಮದಿಂದ, ಸಹನೆಯಿಂದ ದೇಶದ ಆಹಾರ ಭದ್ರತೆಗೆ, ಆರ್ಥಿಕ ಸುಸ್ಥಿತಿಗೆ ಹಾಗೂ ಪರಿಸರದ ಸಮತೋಲನಕ್ಕೆ ಬಹುಮುಖ್ಯ ಪಾತ್ರವಹಿಸುತ್ತಾನೆ. ರೈತರು ನಮ್ಮ ಸಮಾಜದ ಜೀವನಾಡಿಯಾಗಿದ್ದು, ಅವರಿಗೆ ಸಲ್ಲಬೇಕಾದ ಗೌರವ, ಮಾನ್ಯತೆ ಮತ್ತು ಬೆಂಬಲವನ್ನು ನೀಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಹಾಗು ಹೊಣೆಗಾರಿಕೆ ಎಂದರೆ ತಪ್ಪಾಗಲಾರದು. ಪ್ರಸ್ತುತ ಲೇಖನದಲ್ಲಿ ದ. ರಾ ಬೇಂದ್ರೆಯವರ ಭೂಮಿ ತಾಯಿಯ ಚೊಚ್ಚಿಲ ಮಗ ಕಾವ್ಯವನ್ನು ಕುರಿತು ವಿಮರ್ಶಿಸಲಾಗಿದೆ.*

**Keywords:** *ಕನ್ನಡ ಸಾಹಿತ್ಯ, ಕನ್ನಡ ಕಾವ್ಯ, ದ.ರಾ.ಬೇಂದ್ರೆ, ಭೂಮಿ ತಾಯಿಯ ಚೊಚ್ಚಿಲ ಮಗ*

## ಪೀಠಿಕೆ

ರೈತನಿಗೆ ಭೂಮಿ ತಾಯಿಯ ಚೊಚ್ಚಲ ಮಗ ಎಂದು ಕರೆಯುತ್ತೇವೆ. ಭೂಮಿಯ ಮೇಲಿನ ಸಕಲ ಜೀವ ಜಂತುಗಳಿಗೂ ಆಹಾರವನ್ನು ಒದಗಿಸುವವಳೇ ಭೂಮಿತಾಯಿ ಆದದರಿಂದ ಭೂಮಿಯಿಂದ ಬೆಳೆ ತೆಗೆಯುವ ಒಕ್ಕಲಿಗ ಭೂಮಿ ತಾಯಿಯ ಚೊಚ್ಚಿಲ ಮಗನಾಗುತ್ತಾನೆ. ಚೊಚ್ಚಿಲ ಮಗನಿಗೆ ತನ್ನ ಕುಟುಂಬದಲ್ಲಿ ಕೆಲವೊಂದು ಹಕ್ಕುಗಳು ಹಾಗೂ ಕರ್ತವ್ಯಗಳು ಇರುತ್ತವೆ. ಒಕ್ಕಲಿಗನಿಗೆ ಯಾವ ಹಕ್ಕು ಇಲ್ಲ ಆದರೆ ಕರ್ತವ್ಯ ಮಾತ್ರ ಸಾಕಷ್ಟಿದೆ ಇತರರಿಗೆ ಆತ ಶ್ರಮ ಪಡಬೇಕು ಎನ್ನುತ್ತೇವೆಯೇ ಹೊರತು ಆತನ ಕಷ್ಟ ಸಂಕಷ್ಟಗಳನ್ನು ನಾವು ಗಮನಿಸುವುದಿಲ್ಲ. ಆತನ ಪರಿಶ್ರಮದ ಬಗ್ಗೆ ಹಾಗೂ ಅವನ ಜವಾಬ್ಧಾರಿಯ ಬಗ್ಗೆ ದ.ರಾಬೇಂದ್ರೆಯವರು ತಮ್ಮ "ಭೂಮಿ ತಾಯಿಯ ಚೊಚ್ಚಿಲ ಮಗ" ಎಂಬ ಕಾವ್ಯದಲ್ಲಿ ಅದ್ಭುತವಾಗಿ ವಿವರಿಸಿದ್ದಾರೆ. ಅದರ ಬಗ್ಗೆ ವಿಮರ್ಶಾತ್ಮವಾಗಿ ವಿಮರ್ಶಿಸೋಣ.

ಕರ್ನಾಟಕದಲ್ಲಿ ಹಾಗೂ ಇತರ ರಾಜ್ಯಗಳಲ್ಲಿ ಒಂದೊಂದು ಸಲ ಮಳೆ ಇಲ್ಲದೆ ಬರಗಾಲ ಸಂಭವಿಸುವ ಅವಕಾಶವಿರುತ್ತದೆ ಅಂತಹ ಸಮಯದಲ್ಲಿ ರೈತ ಅನುಭವಿಸುವ ನೋವು

**Please cite this article as:** ಮೀನಾಕ್ಷಿ ಎನ್. ಪಿ. (2025). ದ. ರಾ. ಬೇಂದ್ರೆಯವರ ಭೂಮಿ ತಾಯಿಯ ಚೊಚ್ಚಿಲ ಮಗ ಕಾವ್ಯದ ವಿಮರ್ಶಾತ್ಮಕ ನೋಟ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 4(4), 116–119

ನಲಿವುಗಳನ್ನು ತಡೆಯಲಾಗದೆ ಕೆಲವೊಂದು ಸಂಕಷ್ಟಗಳಿಗೆ ಈಡಾಗುತ್ತಾನೆ. ಮುಂಗಾರು ಮಳೆ ಕೈಕೊಟ್ಟಾಗ, ಬಿತ್ತನೆ ಹೋಗಲಿ, ಕುಡಿಯಲು ಸಹ ನೀರಿಲ್ಲದಂತಹ ಪರಿಸ್ಥಿತಿ ಉದ್ಭಸುವದುಂಟು. ಇಂತಹ ರೈತನ ಪರಿಪಾಟಲನ್ನು ದ.ರಾ.ಬೇಂದ್ರೆಯವರು ತಮ್ಮ ಕಾವ್ಯದಲ್ಲಿ ಸವಿವರವಾಗಿ ವಿವರಿಸಿದ್ದಾರೆ.

***"ಭೂಮಿ ತಾಯಿಯ***
***ಭೂಮಿ ತಾಯಿಯ***
***ಕಣ್ತೆರೆದೊಮ್ಮೆ***
***ನೋಡಿದರೇನು"?***

ಗ್ರಾಮೀಣ ರೈತ ಜನರ ಸ್ಥಿತಿಗತಿಯ ಬಗ್ಗೆ ಚಿಂತಿಸುವ ಕಾಲ ಇದಾಗಿದೆ ಏಕೆಂದರೆ ಅವನ ಪರಿಸ್ಥಿತಿಯ ಬಗ್ಗೆ ಗಮನ ಹರಿಸಬೇಕಾಗಿದೆ. ಆತನು ಇತರರಿಗಾಗಿ ಪಡುವ ಪರಿಶ್ರಮವನ್ನು ಗಮನಿಸಬೇಕಾಗಿದೆ ಹಾಗೂ ಆತನ ಸಂಕಷ್ಟಗಳನ್ನು ನಾವು ಕಣ್ಣೆತ್ತಿ ನೋಡ ಬೇಕಾಗಿದೆ ಆದರೆ ನಾವೆಲ್ಲರೂ ಆತನ ಬಗೆಗೆ ಉದಾಸೀನ ಭಾವನೆಯನ್ನು ತಳೆದಿದ್ದೇವೆ. ಆದುದರಿಂದಲೇ ಬೇಂದ್ರೆಯವರು, ಕವನದ ಪ್ರಾಸ್ತಾವಿಕ ನುಡಿಯಲ್ಲಿ ಭೂಮಿ ತಾಯಿಯ ಚೊಚ್ಚಿಲ ಮಗನನ್ನು ಕಣ್ತೆರೆದೊಮ್ಮೆ ನೋಡಿದರೇನು? ಎಂದು ಕೇಳುತ್ತಿದ್ದಾರೆ! ಸರಿ, ಕಣ್ತೆರೆದು ನೋಡಿದಾಗ ಕಾಣಸಿಗುವುದೆ ಬೇರೆ ಜಗತ್ತು. ಹಿಂದೆ ಇದ್ದ ನೆಮ್ಮದಿ ಇಂದು ಹಳ್ಳಿಗಳಲ್ಲಿನ ರೈತರಲ್ಲಿ ಮರೆಯಾಗಿದೆ. ಸಾಮರಸ್ಯ, ಸ್ವಾಭಿಮಾನ ಯಾವುದೂ ಇಂದು ಉಳಿದಿಲ್ಲ ಉತ್ತಮ ನಾಳೆಯು ಬರಲಿದೆ; ಎಂದು ಕಾಯುತ್ತಿರುವ ರೈತನ ಜೀವನವೇ ಬೇರೆ ರೀತಿಯಾಗಿದೆ. ಅದಕ್ಕೆ ಬೇಂದ್ರೆಯವರ ಈ ಮಾತು ಸೂಕ್ತವಾಗಿದೆ.

***"ಮುಗಿಲೆಂಬುವುದು***
***ಕಸಿದಿತು ಹಲ್ಲು!***
***ಬಂದಾ ಬೆಳೆಯು***
***ಮಿಡಿಚಿ ಮೇವು;***
***ಬಿತ್ತಿದ್ದಾಯಿತು***
***ಉತ್ತಿಯ ಮಣ್ಣು"***

ಭೂತಾಯಿಯ ಹಿರಿಯ ಮಗನ ಮೊದಲ ಕೆಲಸ ಉಳುಮೆ? ಹೊಲವನ್ನು ಉತ್ತಲು ಹಾಗೂ ಬಿತ್ತಲು ಮುಂಗಾರು ಮಳೆ ಬರುವುದೇಂದು ಪ್ರತೀಕ್ಷೆಯನ್ನು ಮಾಡುತ್ತಿದ್ದಾನೆ, ಮುಗಿಲನ್ನು ದಿಟ್ಟಿಸಿ ನೋಡುತ್ತಿದ್ದಾನೆ, ಆದರೆ ಮುಗಿಲು, 'ಕಿಸಿದಿತು ಹಲ್ಲು ಎಂದರೆ ಒಕ್ಕಲಿಗನನ್ನು ಮುಗಿಲು ಅಣುಕಿಸುತ್ತಿದೆ, ಹಿಯಾಳಿಸುತ್ತಿದೆ. ನನ್ನಿಂದಲೇ ನಿನ್ನ ಜೀವನ ಎಂಬುವಂತೆ ಟೀಕಿಸುತ್ತಿದೆ. ಒಮ್ಮೆ ಮಳೆ ಆದೀತು ಎಂಬ ಆಶಾಭಾವ ತೋರಿದರೆ, ಮರು ಕ್ಷಣದಲ್ಲೆ ಮೋಡವೆಲ್ಲ ಮರೆಯಾಗಿ ನಿಗಿ–ನಿಗಿ ಮುಗಿಲು ಕಾಣಿಸುತ್ತಿದೆ. ಮುಂಗಾರು ಮಳೆಯ ನಾಲ್ಕು ಹನಿ ಬಿದ್ದರೆ ಸಾಕು, ಒಕ್ಕಲಿಗ ಉತ್ಸಾಹದಿಂದ ತನ್ನ ಹೊಲವನ್ನು ಉತ್ತಲು ಪ್ರಾರಂಭಿಸುತ್ತಾನೆ. ಆಯಿತು ಅಲ್ಪ–ಸ್ವಲ್ಪ ಮಳೆಯಾಗಿ, ಅಷ್ಟಿಷ್ಟು ಬೆಳೆಯಾದರೂ ಬಂದಿತಲ್ಲ ಎಂದು ಸಮಾಧಾನ ಮಾಡಿಕೊಳ್ಳಲು ಆಗುತ್ತಿಲ್ಲ, ಏಕೆಂದರೆ' 'ಬಂದ ಬೆಳೆಯು ಮಿಡಿಚಿಯ ಮೇವು' ಮಿಡಿಚಿಯ ಪಾಲಾದರೆ ಅವನಿಗೇನು ಉಳಿವುದು, ಬರಿ ಉತ್ತಿದ ಮಣ್ಣು. ಆದುದರಿಂದಲೆ ಇಂದು ರೈತ ಆತ್ಮಹತ್ಯೆಗೆ ಶರಣಾಗುತ್ತಿದ್ದಾನೆ. ಮಾನವ ಇತಿಹಾಸಲ್ಲಿ ಹಿಂದೆಂದೂ ಯಾವ ರಾಷ್ಟ್ರದಲ್ಲೂ ಕಂಡಿರದಷ್ಟು ದೊಡ್ಡ ಪ್ರಮಾಣದಲ್ಲಿ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಹತ್ತು ಸಾವಿರವಲ್ಲ, ಐವತ್ತು ಸಾವಿರವಲ್ಲ, ನೂರಿಪ್ಪತ್ತು ಸಾವಿರ ಸಾವು ಸಂಭವಿಸಿದ ನಂತರ ಅಲ್ಲೊಂದು ಇಲ್ಲೊಂದು ತನಿಖೆಗಳು ಆರಂಭವಾದವು. ಸಾವಿನ ಸಂಖ್ಯೆ ನೂರೈವತ್ತು ಸಾವಿರ ದಾಟಿದ ಮೇಲೆ ರೈತರಿಗೆ ವಿಶೇಷ ಪ್ಯಾಕೇಜ್ಗಳ ಆಶ್ವಾಸನೆ ಬರತೊಡಗಿದವು. ಆಗ ಕೇಂದ್ರ ಸರ್ಕಾರ 60 ಸಾವಿರ ಕೋಟಿ ರೂಪಯಿಗಳ ಸಾಲಮನ್ನಾ ಘೋಷಣೆ ಮಾಡಿತು. ಅದು ಐತಿಹಾಸಿಕ ನಿರ್ಣಯವೆಂಬಂತೆ ಒಂದು ವಾರ ಕಾಲ ರಾಷ್ಟ್ರೀಯ ಟಿವಿ ಚಾನೆಲ್ ಗಳಲ್ಲಿ ಅರ್ಥಶಾಸ್ತ್ರಜ್ಞರು ಚರ್ಚೆ ನಡೆಸಿದರು. ಅದರೂ ರೈತನ ಸಮಸ್ಯೆ ಪ್ರಮಾಣ ಕಡಮೆಯಾಗಲಿಲ್ಲ. ಅವನ ಪರಿಶ್ರಮ ಇನ್ನೂ ಕಠಿಣ ಪರಿಸ್ಥಿತಿಯತ್ತ ಸಾಗುತ್ತಿದೆ. ಅವನ

ದಿನನಿತ್ಯದ ಬದುಕಿನ ಬಗ್ಗೆ ಬೇಂದ್ರೆಯವರು ಹೀಗೆ ತಮ್ಮ ಕವನದಲ್ಲಿ ವಿವರಿಸಿದ್ದಾರೆ.

***"ದಿನವೂ ಸಂಜೆಗೆ***
***ಬೆವರಿನ ಜಳಕ,***
***ಉಸಿರಿನ ಕೂಳಿಗೆ***
***ಕಂಬನಿ ನೀರು!***
***ಹೊಟ್ಟೆಯು ಹತ್ತಿತು***
***ಬೆನ್ನಿನ ಬೆನ್ನು"!***

ಹಳ್ಳಿ ಎಂದರೆ ಅನಭಿವೃದ್ಧಿ, ಪೇಟೆ ಎಂದರೆ ಅಭಿವೃದ್ಧಿ ಎನ್ನುವ ಕಲ್ಪನೆ ಕೇವಲ ವ್ಯಕ್ತಿಗಳಿಗೆ ಮಾತ್ರ ಅನ್ವಯವಾಗುವುದಲ್ಲ ದೇಶವೊಂದರ ಅಭಿವೃದ್ಧಿ, ಅನಭಿವೃದ್ಧಿಗಳು ಕೂಡ ಇದೇ ಮಾನದಂಡದಿಂದ ತೀರ್ಮಾನಗೊಳ್ಳುತ್ತಿದೆ. ವ್ಯಕ್ತಿ ಮತ್ತು ದೇಶಗಳು ಆರ್ಥಿಕವಾಗಿ ಬಲಗೊಳ್ಳಬೇಕಾದರೆ ಪೇಟೆ ಪಟ್ಟಣಗಳು ಬೆಳೆಯಬೇಕು ಹಾಗೆಯೇ ಹಳ್ಳಿಗಳು ಕೂಡ ಬೆಳೆಯಬೇಕಾಗಿದೆ ಆದರೆ ರೈತನಲ್ಲಿ ಯಾವುದೇ ಅಭಿವೃದ್ಧಿ ಕಾಣದಾಗಿದೆ. ನಮ್ಮ ರೈತನ ಉತ್ಪಾದನಾ ಸಾಮರ್ಥ್ಯ ಕಡಿಮೆ ನಮ್ಮ ಒಕ್ಕಲಿಗನು ಹಗಲು ಹನ್ನೆರಡು ತಾಸು ತನ್ನ ಹೊಲದಲ್ಲಿ ಎತ್ತುಗಳ ಜೊತೆಗೆ ಎತ್ತಿನಂತಯೇ ದುಡಿದರು, ದುಡಿಮೆಗೆ ಸರಿಯಾದ ಬೆಲೆ ಸಿಗದೆ ಒದ್ದಾಡುವಂತಾಗಿದೆ. ಆದುದರಿಂದಲೇ ಬೆಂದ್ರೆಯವರು 'ದಿನವೊ ಸಂಜೆಗೆ ಬೆವರಿನ ಜಳಕ' ಎನ್ನುತ್ತಾರೆ ಇಷ್ಟೆಲ್ಲ ಶ್ರಮಪಟ್ಟ ರೈತನಿಗೆ ಸಂಜೆಯ ಹೊತ್ತಿಗೆ ಶ್ರಮದ ಪ್ರತಿಫಲವಾಗಿ ಒಂದಿಷ್ಟು ಕೂಳು ಸಿಗುತ್ತದೆ ಎನ್ನುವಂತಿಲ್ಲ, ಏಕೆಂದರೆ ಬೆಳೆ ಬಂದ ನಂತರ ಹೊಲದ ಮಾಲೀಕನಿಗೆ ಅವನ ಪಾಲು ಕೊಟ್ಟ ನಂತರವೇ, ತನ್ನ ಭಾಗ ಉಳಿಯುವುದು. ಆದುದರಿಂದ ಅಲ್ಲಿಯವರೆಗೆ 'ಇವನ ಉಚ್ಚ್ವಾಸವೇ ಇವನಿಗೆ ಕೂಳು, ಇವನ ಕಂಬನಿಯೇ ಇವನಿಗೆ ಕುಡಿಯಲು ಸಿಗುವ ನೀರಾಗಿದೆ. ಉಸಿರಿನ ಕೂಳನ್ನು ಹಾಗೂ ಕಣ್ಣೀರ ನೀರನ್ನೇ ಕುಡಿದು ಬದುಕಬೇಕಾದ ಸ್ಥಿತಿ ಬರುತ್ತದೆ ಅದಕ್ಕೆ ರೈತನ ಹೊಟ್ಟೆ ತನ್ನ ಬೆನ್ನಿಗೆ ಅಟ್ಟಿಕೊಂಡಿದೆ ಎಂದು ಹೇಳುವುದು. ಹೀಗೆ ಅವನ ಬೆಳೆಗೆ ಮತ್ತು ಅವನ ದುಡಿಮೆ ಬೆಲೆ ಇಲ್ಲದಾಗ ಮನಸ್ಸಿಗೆ ಗಾಸಿಯಾಗುವುದು ಖಂಡಿತ ಆತನ ಮನಸ್ಸಿನ ತಳಮಳವನ್ನು ಹೀಗೆ ಬೇಂದ್ರೆಯವರು ವ್ಯಕ್ತ ಪಡಿಸಿದ್ದಾರೆ.

***"ಎದೆಯಗೂಡಿನೊಳು***
***ಚಿಂತೆಯ ಗೂಗಿ!***
***ಮಿದುಳಿನ ಮೂಲೆಗೆ***
***ಲೊಟ ಲೊಟ ಹಲ್ಲಿ"!***

ರೈತನ ಎದೆಯಲ್ಲಿ ಹಲವು ಒತ್ತಡಗಳಿಂದ ಕೂಡಿದ ಸಮಸ್ಯೆಗಳಿವೆ, ಆ ಸಮಸ್ಯೆಗಳನ್ನು ಈಡೇರಿಸಿಕೊಳ್ಳುವ ಮಾರ್ಗವನ್ನು ಹುಡುಕುವಾಗ ಹಾಗೂ ಪರಿಹಾರಗಳನ್ನು ನಿವಾರಿಸಿಕೊಳ್ಳಬೇಕೆಂದು ಬಯಸುವ ಸಮಯದಲ್ಲಿ ಗೋಡೆಯಲ್ಲಿರುವ ಹಲ್ಲಿಯು ಕೂಡ ಅಪ ಶಕುನದ ರೀತಿಯಲ್ಲಿ ಲೊಚಗುಡುತ್ತಿದೆ. ಆ ಲೊಟ ಲೊಟ ಹಲ್ಲಿ ಶಬ್ದ ಇವನ ಮೆದುಳಿಗೆ ಮೂಲೆಯಲ್ಲಿ ಪದೇ ಪದೇ ಆತನಿಗೆ ಹೇಳುತ್ತಲೇ ಇದೆ; ಇದು ತೀರಾ ಕೆಟ್ಟ ಪರಿಸ್ಥಿತಿ, ಇದು ಬದಲಾಗುವುದಿಲ್ಲವೆಂದು ಅದುದರಿಂದ ಆತಂಕದ ಹಾಗೂ ಚಿಂತೆಯ ನೋವನ್ನು ರೈತ ತನ್ನ ಎದೆಯ ಗೂಡಿನಲ್ಲಿ ಇಟ್ಟು ಕೊಂಡಿರುತ್ತಾನೆ ಮತ್ತು ಚಿಂತೆ ಎನ್ನುವ ಗೂಗಿ(ಗೂಬೆ) ಆಕ್ರಮಿಸಿಕೊಂಡಿದೆ. ಹಗಲಿನಲ್ಲಿ ಗೂಗಿ ಎಲ್ಲೂ ಹೊರಬೀಳುವುದಿಲ್ಲ, ನಮ್ಮ ರೈತನಂತೆ; ಇರುಳಿನಲ್ಲಿ ತನ್ನ ಚಿಂತೆಯಲ್ಲಿ ತಾನಿರುತ್ತದೆ. ಅದರಂತೆಯೇ ನಮ್ಮ ರೈತನೂ ಸಹ ಯಾರನ್ನೂ ನೋಡದೆ, ಯಾರಿಗೂ ಹೇಳದೆ ತನ್ನ ನೋವನ್ನ ತಾನೆ ನುಂಗಿಕೊಳ್ಳುತ್ತಾನೆ.

ಇಂದಿನ ರೈತರು ಅಭಿವೃದ್ಧಿಯಾಗಬೇಕಾದರೆ ಜೀರ್ಣಿಸಿಕೊಳ್ಳುವಷ್ಟು ಭೂಮಿ ಬೇಕು. ಇಲ್ಲವೇ ಬಂಡವಾಳ ಬೇಕು, ಇಲ್ಲವೇ ಆಧುನಿಕ ಸ್ಕಿಲ್ ಬೇಕು. ಆದರೆ ಗ್ರಾಮೀಣ ಪ್ರದೇಶದ ಮೂರನೇ ಒಂದರಷ್ಟು ಜನರಲ್ಲಿ ಭೂಮಿಯೇ ಇಲ್ಲ. ಭೂಮಿ ಇರುವ ಮೂರನೇ ಎರಡರಷ್ಟು ಜನರಲ್ಲಿ ಮುಕ್ಕಾಲು ಭಾಗ ಕುಟುಂಬಗಳಲ್ಲಿ ಒಂದರಿಂದ ಒಂದೂವರೆ ಎಕರೆ

ಭೂಮಿ ಇದೆ. ಭೂಮಿ ಇಲ್ಲದವರು ಮತ್ತು ಅಲ್ಪಸ್ವಲ್ಪ ಭೂಮಿ ಇರುವವರ ನಡುವಿನ ವ್ಯತ್ಯಾಸ ಅತ್ಯಲ್ಪ. ಭೂಮಿ ಇಲ್ಲದವರು ವರ್ಷಪೂರ್ತಿ ಮತ್ತೊಬ್ಬರಲ್ಲಿ ಕೂಲಿಗೆ ದುಡಿದರೆ ಅಲ್ಪ ಸ್ವಲ್ಪ ಭೂಮಿ ಇರುವವರು ವರ್ಷದ ಹೆಚ್ಚಿನ ದಿನಗಳಲ್ಲಿ ಮತ್ತೊಬ್ಬರಲ್ಲಿ ದುಡಿಯುತ್ತಾರೆ. ಇವರ ಸಮಸ್ಯೆಯನ್ನು ಬಗೆಹರಿಸಲು ಸರ್ಕಾರ ಮುತುವರ್ಜಿ ವಹಿಸುವುದು ಸೂಕ್ತವಾಗಿದೆ. ಹೇಗೆಂದರೆ ಕೃಷಿಯ ಜತೆಗೆ ಕೃಷಿಯೇತರ ಚಟುವಟಿಕೆಗಳು ಮಹತ್ವ ಪಡೆಯಬೇಕು. ಇವುಗಳ ಜತೆಗೆ ಭೂಮಿ, ಬಂಡವಾಳ ಇಲ್ಲದವರಿಗೆ ಭೂಮಿ, ಬಂಡವಾಳಗಳನ್ನು ನೀಡುವ ಕ್ರಮಗಳನ್ನು ಪರಿಗಣಿಸಬೇಕು. ಒಂದು ವೇಳೆ ಭೂಮಿ, ಬಂಡವಾಳ ಕೊಡಲು ಸಾಧ್ಯವಾಗದಿದ್ದರೆ ಜನರು ದುಡಿದು ಗಳಿಸಲು ಅವಶ್ಯವಿರುವ ಶಿಕ್ಷಣ, ಆರೋಗ್ಯ, ವಸತಿಗಳನ್ನು ಸುಧಾರಿಸುವ ಕಾರ್ಯಕ್ರಮಗಳು ಹೆಚ್ಚು ಮಹತ್ವ ಪಡೆಯಬೇಕಾಗಿದೆ. ಹೆಚ್ಚು ಕಡಿಮೆ ಮೂರನೇ ಎರಡರಷ್ಟು ಗ್ರಾಮೀಣ ಜನರು ಭೂಮಿ, ಬಂಡವಾಳ, ಶಿಕ್ಷಣ ಆರೋಗ್ಯಗಳ ಕೊರತೆ ಅನುಭವಿಸುತ್ತಿದ್ದಾರೆ. ಇವರು ಅಭಿವೃದ್ಧಿ ಹೊಂದ ಬೇಕಾದರೆ ಭೂಮಿ, ಹಣಕಾಸು, ನೀರಾವರಿ, ವಿದ್ಯುತ್, ಸಾರಿಗೆ, ಸಂಪರ್ಕಗಳ ಜೊತೆಗೆ ಶಿಕ್ಷಣ, ಆರೋಗ್ಯ, ಕುಡಿಯುವ ನೀರು, ವಸತಿ ನೈರ್ಮಲ್ಯ ಮುಂತಾದವುಗಳನ್ನು ಸರ್ಕಾರ ನೆರವೇರಿಸಿದರೆ ಗ್ರಾಮೀಣ ರೈತ ಜನರ ಬದುಕು ಹಸನಾಗುತ್ತದೆ.

**ಪರಾಮರ್ಶನ ಗ್ರಂಥಗಳು**


- ಅಂಬಿಕಾತನಯದತ್ತ (1938). ನಾದಲೀಲೆ. ಕರ್ನಾಟಕ ಸಂಘ. ಪುಟ. 36–37
- ಅ.ನ.ಕೃ. (2016). *ಅ.ನ.ಕೃ. ಅವರ ಸಮಗ್ರ ಕಥಾ ಸಂಕಲನ.* ಹೇಮಂತ ಸಾಹಿತ್ಯ.
- ಚಂದ್ರಪೂಜಾರಿ, ಎಂ. (2016). *ಗ್ರಾಮೀಣಾಭಿವೃದ್ಧಿ.* ಕುವೆಂಪು ಭಾಷಾ ಭಾರತಿ ಪ್ರಾಧಿಕಾರ.
- ಲಕ್ಷ್ಮಣ ಕೊಡಸೆ. (2008). *ಭೂಮಿ ಹುಣ್ಣಿಮೆ.* ರೂಪ ಪ್ರಕಾಶನ
- ಮಧರ ಚೆನ್ನ. (2011). *ನನ್ನ ನಲ್ಲ.* ಕನ್ನಡ ಮತ್ತು ಸಂಸ್ಕೃತಿ ಇಲಾಖೆ